ಗೋಕಾಕ್ ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆ

೭೭೩. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ ?

ಅ) ಗೋಕಾಕ್ ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆಗೆ ಎಷ್ಟು ಗ್ರಾಮಗಳನ್ನು ಆಳವಡಿಸಲಾಗಿದೆ ?

ಆ) ಇಲ್ಲಿಯವರೆಗೆ ಸದರಿ ಯೋಜನೆಗೆ ತಗಲಿರುವ ವೆಚ್ಚವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೯ ಗ್ರಾಮಗಳು ಅದರಲ್ಲಿ ೪ ಗ್ರಾಮಗಳಲ್ಲಿ ಯೋಜನೆಯು ಪೂರ್ಣಗೊಂಡಿವೆ. ಎರಡು ಗ್ರಾಮಗಳಲ್ಲಿ ಪ್ರಗತಿಯಲ್ಲಿದೆ. ಉಳಿದ ಮೂರು ಗ್ರಾಮಗಳಲ್ಲಿ ಯೋಜನೆಗಳು ವಿಫಲವಾಗಿವೆ.

ಆ) ರೂ. ೯.೬೪ ಲಕ್ಷ.

ಗೋಕಾಕ್ ತಾಲ್ಲೂಕಿನ ಕನಸಗೇರಿ ಏತ ನೀರಾವರಿ ಯೋಜನೆ ಬಗ್ಗೆ

೭೭೪. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).— ಮಾನ್ಯ ಸಣ್ಣ ನೀರಾವರಿ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನಸಗೇರಿ ಏತ ನೀರಾವರಿ ಕೆಲಸ ಆಯವ್ಯಯದಲ್ಲಿ ಸೇರಿದ್ದರೂ ಪ್ರಾರಂಭಿಸದಿರಲು ಕಾರಣವೇನು ?

ಆ) ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು ?

ಇ) ಈ ಯೋಜನೆಯಿಂದ ನೀರಾವರಿಯಾಗುವ ಕ್ಷೇತ್ರ ಎಷ್ಟು ?

ಈ) ಈ ಯೋಜನೆಯಲ್ಲಿ ಬರುವ ಗ್ರಾಮಗಳಾವುವು ?

ಶ್ರೀ ಕೆ. ಕೃಷ್ಣಮೂರ್ತಿ (ಸಣ್ಣ ನೀರಾವರಿ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು).—

ಅ) ಈ ಕಾಮಗಾರಿಯನ್ನು ವಿಜಾಪುರದ ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ ನಿಯಮಿತವು ಕಾರ್ಯಗತಗೊಳಿಸಬೇಕಾಗಿದ್ದು, ಅದರ ಪರಿಶೀಲನೆಯಲ್ಲಿದೆ.

ಆ) ಆರ್ಥಿಕ ಮತ್ತು ತಾಂತ್ರಿಕವಾಗಿ ಸೂಕ್ತ ಕಂಡುಬಂದಲ್ಲಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಇ) ೧೬೨೦ ಹೆಕ್ಟೇರುಗಳು.

ಈ) ಕನಸಗೇರಿ, ಬೆಣಚನಮರಡಿ, ಉರಬಿನಟ್ಟಿ, ಸೀಗಿಹೊಳೆ, ಗದ್ದೆ ಹೊಳೆ, ದಾಸನಹಟ್ಟಿ, ಅಕ್ಕತಂಗಿಯರ ಹಾಳ್, ಈರನಹಟ್ಟಿ ಮತ್ತು ಮಾಡಿವಾಳ.

ಹೊಸದುರ್ಗ ತಾಲ್ಲೂಕಿನಲ್ಲಿ ತೆಂಗು ಒಡ್ಡು ನಿರ್ಮಾಣ

೭೭೭. ಶ್ರೀ ಜಿ. ರಾಮದಾಸ್ (ಹೊಸದುರ್ಗ) — ಮಾನ್ಯ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಹೊಸ ಕೆರೆಗಳ ನಿರ್ಮಾಣಕ್ಕೆ ಆಣೆ ಹಾಕಿರುವುದರಿಂದ ಪೆಚ್ಚಿನ ಸಂಖ್ಯೆಯಲ್ಲಿ ತೆಂಗು ಒಡ್ಡುಗಳನ್ನು ನಿರ್ಮಿಸುವ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆಯೆ ?

ಆ) ಹಾಗಿದ್ದಲ್ಲಿ ೧೯೮೮-೮೯ನೇ ಸಾಲಿನಲ್ಲಿ ಈ ತಾಲ್ಲೂಕಿನಲ್ಲಿ ಎಷ್ಟು ತೆಂಗು ಒಡ್ಡುಗಳನ್ನು ನಿರ್ಮಿಸಲಾಗುವುದು ?